ಯಾವುದಾದರೂ ಪ್ರಾಣಿಯೋ, ಪಕ್ಷಿಯೋ ದಾರಿಯಲ್ಲಿ ಅಚಾನಕ್ಕಾಗಿ ಕಂಡರೆ ಚಕ್ಕನೆ ನಿಂತು ಪಟ ತೆಗೆಯಲು ಸಾಧ್ಯವಾಗುತ್ತದೆ ಎಂದು ಯಾವಾಗಲೂ ಹೀಗೆ ಕ್ಯಾಮೆರಾ ಇಟ್ಟುಕೊಳ್ಳುವುದು ವಾಡಿಕೆ. ಅವುಗಳನ್ನು ನೋಡಿದವನೆ ಗನ್‌ಗಳನ್ನೇ ಕಂಡಷ್ಟು ಭಯ ವ್ಯಕ್ತಪಡಿಸಿದ. ವೀರಪ್ಪನ್ ಗುಂಪಿಗೆ ಸೇರಿದ ಆಸಾಮಿಗಳನ್ನು ನೋಡುವಂತೆ ಕೆಕ್ಕರಿಸಿ ನೋಡಿದ.

ಅಷ್ಟರಲ್ಲೇ ಫಳಫಳ ಬೆಳಕು ಹೊಡೆಯುತ್ತಾ ತೆಪ್ಪಗೆ ಬಿದ್ದಿದ್ದ ಡ್ರೋಣ್ ಕ್ಯಾಮೆರಾ ಕಾರಿನಲ್ಲಿ ಎದ್ದು ಕೂತು ಶಬ್ದ ಮಾಡಿತು. ಅದನ್ನು ನೋಡಿದವನೇ ಮತ್ತಷ್ಟು ಗಾಬರಿ ಪ್ರಕಟಿಸಿದ. ಅವನ ವರ್ತನೆ, ಹಾವಭಾವ ನೋಡುತ್ತಿದ್ದರೆ ನಾವು ಮಾಡಬಾರದ ಮಹಾತಪ್ಪನ್ನು ಮಾಡಿ ಸಿಕ್ಕಿ ಬಿದ್ದವರ ಥರ ಕಾಣುತ್ತಿದ್ದೆವು. ಡ್ರೋಣ್ ಕ್ಯಾಮೆರಾ ಎತ್ತಿ ಹಿಡಿದು, 'ಕಳ್ಳ ಬಡ್ಡಿ ಮಕ್ಕಳ... ಮಾಡ್ತಿನಿರಿ' ಎಂದವನೆ ವಾಕಿಟಾಕಿಯಲ್ಲಿ ರೆಡ್ ಅಲರ್ಟ್ ಘೋಷಿಸಿಬಿಟ್ಟ. ಅದು ಎಲ್ಲಾ ಸಂಚಾರಿ ದಳದ ಅಧಿಕಾರಿಗಳಿಗೆ ತಲುಪಿತು. ಮುಂದಿನ ಹತ್ತು ನಿಮಿಷದಲ್ಲಿ ಮೂರು ಗಸ್ತು ವಾಹನಗಳು ಹತ್ತಾರು ಫಾರೆಸ್ಟ್ ಸಿಪಾಯಿಗಳು ಬಂದೂಕು ಸಮೇತ ನಮ್ಮ ಸುತ್ತುವರೆದಿದ್ದರು. ಅಲ್ಲಿಗೆ ನಮ್ಮನ್ನು ಬಂಧಿಸುವುದು ಅಖೈರಾಗಿತ್ತು.

ಮೊಸಳೆ ತಮಗೆ ತಿಳಿದ ತಮಿಳುನಾಡಿನ ಅನೇಕ ಫೋಟೊಗ್ರಾಫರ್ ಸ್ನೇಹಿತರಿಗೆ ದೂರವಾಣಿ ಕರೆ ಮಾಡಿ ಸಹಾಯ ಕೋರಿದರು. ತಾವು ಈ ಮೊದಲು ಕರ್ನಾಟಕದ ಅರಣ್ಯ ಇಲಾಖೆಗೆ ವೈಲ್ಡ್ ಲೈಫ್ ವಾರ್ಡನ್ ಆಗಿ ಕೆಲಸ ಮಾಡಿರುವುದಾಗಿ ಹೇಳಿದರು. ಇದನ್ನು ಅವರ್‍ಯಾರೂ ಕೇಳಿಸಿಕೊಳ್ಳಲು ತಯಾರಿರಲಿಲ್ಲ.

ಮುಂದೆ ಕ್ಯಾಮೆರಾಗಳನ್ನು ನನ್ನ ಕಾರಿನ ಬಾನೆಟ್ ಮೇಲೆ ಜೋಡಿಸಲಾಯಿತು. ಅವುಗಳ ಮಧ್ಯೆ ನಮ್ಮನ್ನು ಘನಘೋರ ಅಪರಾಧಿಗಳಂತೆ ನಿಲ್ಲಿಸಿದರು. ಉಳಿದ ಅಧಿಕಾರಿಗಳೆಲ್ಲಾ ಮಾಲು ಸಮೇತ ಕಳ್ಳರ ಹಿಡಿದ ರೀತಿ ನಮ್ಮ ಹಿಂದೆ ನಿಂತು ಪೋಸು ಕೊಟ್ಟರು. ಒಬ್ಬ ಪಟ ತೆಗೆದ. ಪತ್ರಿಕೆಗಳಲ್ಲಿ ಜಿಂಕೆ ಕೊಂದವನ, ಆನೆ ದಂತ ಕಳವು ಮಾಡಿದವನ, ಗಂಧ ಸಾಗಣೆ ಮಾಡಿ ಸಿಕ್ಕಿಬಿದ್ದ ಗ್ಯಾಂಗುಗಳನ್ನು ಕಾರು, ಆಟೋ, ವ್ಯಾನಿನ ಮುಂದೆ ಮಾಲು ಸಮೇತ ಇಡಿಸಿ ಪ್ರಕಟಿಸುವ ಪಟಗಳು ನೆನಪಿಗೆ ಬಂದವು. ನಮ್ಮ ಬಂಧನ ಕೂಡ ಹೀಗೆ ನಡೆದಿತ್ತು.

ನಮ್ಮನ್ನು ಕ್ಯಾಮೆರಾಗಳ ಸಮೇತ ಒಂದು ವ್ಯಾನಿಗೆ ತುಂಬಿಕೊಂಡರು. ನಮ್ಮ ಕಾರನ್ನು ಫಾರೆಸ್ಟ್ ಗಾರ್ಡ್ ಒಬ್ಬ ಚಲಾಯಿಸುತ್ತಾ ಹಿಂದೆ ಬರತೊಡಗಿದ. ನಾವು ಇಳಿದು ಹಾಯ್ ಎಂದು ತೃಪ್ತಿ ಪಟ್ಟುಕೊಂಡಿದ್ದ ಅದೇ ವಾಲ್ಪರೈ ಬೆಟ್ಟವನ್ನು ಮತ್ತೆ ಹತ್ತಿಸುತ್ತಾ ಕರಕೊಂಡು ಹೊರಟರು. ಅಷ್ಟರಲ್ಲಿ ಮಳೆ ಕೂಡ ಶುರುವಾಯಿತು. ನಮ್ಮನ್ನು ಆ ಕಾಡಿನ ನಡುವೆ ಇದ್ದ ಫಾರೆಸ್ಟ್ ಕಚೇರಿಯೊಂದಕ್ಕೆ ಎತ್ತಾಕಿಕೊಂಡು ಹೋಗಿ ಬಿಸಾಡಿದರು. ಇಲ್ಲಿ ಕೂತು ಕೊಳ್ಳಿ ಎಂದು ಒಬ್ಬ ಆರ್ಡರ್ ಮಾಡಿ ಹೋದ.

ಆ ಕಚೇರಿಯ ಗುಮಾಸ್ತ ನಮ್ಮ ಕ್ಯಾಮೆರಾಗಳ ಕಾರ್ಡುಗಳನ್ನು ಹೊರತೆಗಿಸಿ ತನ್ನ ಲ್ಯಾಪ್ ಟ್ಯಾಪಿನಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿದ. ನಾವು ಕೇರಳದ ಎರುವಿಕುಲಂನಲ್ಲಿ ತೆಗೆದ ಕಾಡು ಮೇಕೆಗಳು, ಗ್ರೇಟ್ ಹಾರ್ನ್ ಬಿಲ್ ಹಾಗೂ ಪುದುತೋಟಂನಲ್ಲಿ ತೆಗೆದ ಸಿಂಹಬಾಲದ ಕೋತಿಯ ಪಟಗಳಿದ್ದವು. 'ಇವೆಲ್ಲಾ ವೈಲ್ಡ್ ಆಕ್ಟ್ ಅಡಿ ಬರುತ್ತವೆ. ಯಾರಿಗೆ ಕೇಳಿ ಫೋಟೊ ತೆಗೆದಿರಿ. ನಿಮಗೆ ಅನುಮತಿ ಕೊಟ್ಟವರು ಯಾರು? ನಿಮ್ಮನ್ನು ಬಂಧಿಸಿದ್ದು ಸರಿಯಿದೆ' ಎಂದು ತೀರ್ಪು ಕೊಟ್ಟು ಗಾಬರಿ ಹೆಚ್ಚಿಸಿದ.

ನಾನು ತುಂಬಾ ಬೇಡಿಕೊಂಡಾಗ, 'ಸಾಹೇಬರು ಫೈನ್ ಬಾಬ್ತು ಐದು ಲಕ್ಷ ಕೇಳುತ್ತಿದ್ದಾರೆ. ಕೊಟ್ಟರೆ ನಾನೇ ಮಾತಾಡಿ ಸೆಟಲ್ಮೆಂಟ್ ಮಾಡಿ ಬಿಡಿಸುತ್ತೇನೆ' ಎಂದು ಮಧ್ಯಸ್ತಿಕೆ ವಹಿಸಿಕೊಳ್ಳುವ ಮಾತಾಡಿದ. 'ಇಲ್ಲದಿದ್ದರೆ ನಿಮ್ಮ ಕ್ಯಾಮೆರಾ ಹಾಗೂ ಗಾಡಿ ಸೀಜ್ ಮಾಡಿ ನಾಳೆ ಕೋರ್ಟಿಗೆ ಹಾಜರುಪಡಿಸುತ್ತೇವೆ' ಎಂದು ಹೆದರಿಸಿದ. ನಮ್ಮ ಬಳಿ ಅಷ್ಟೊಂದು ಹಣ ಇಲ್ಲವೆಂದೂ ಗೋಗರೆದೆವು. ಅಷ್ಟರಲ್ಲಿ ದೊಡ್ಡ ಸಾಹೇಬ ಭಯಂಕರ ಮೀಸೆ ಹೊತ್ತು ಸಿಡುಕು ಮುಖದಲ್ಲಿ ಕಚೇರಿಗೆ ವಕ್ಕರಿಸಿದ. ನಮ್ಮನ್ನು ಕಳ್ಳರ ತರಹ ನಿಲ್ಲಿಸಿಕೊಂಡು ತನಿಖೆ ಶುರು ಮಾಡಿದ. 'ನೀವೆಲ್ಲಾ ಪ್ರಾಣಿಗಳ ಚಲನಚಿತ್ರ ತೆಗೆದು ಕೋಟಿಗಟ್ಟಲೆ ಕಾಸು ಕಮಾಯಿಸುವ ಗ್ಯಾಂಗಿನವರೆಂದು ನನಗೆ ಗೊತ್ತು. ಇಲ್ಲೀತನಕ ನಿಮ್ಮ ಪರವಾಗಿ ಅದೆಷ್ಟು ಜನರಿಂದ ನನಗೆ ಫೋನ್ ಮಾಡಿಸಿದ್ದೀರಿ ಎಂದಾಗಲೇ ನೀವು ಅದೆಷ್ಟು ಪ್ರಭಾವಿಗಳು ಎಂದು ಅರಿತು ಹೋದೆ. ಯಾವನು ಶಿಫಾರಸ್ಸು ಮಾಡಿದರೂ ನಾನು ಜಗ್ಗುವ